೨. ದಿನಾಂಕ ೧೫-೧-೨೦೦೦ ರಂದು ಬೆಳಿಗ್ಗೆ ೧೦-೩೦ರ ಸಮಯದಲ್ಲಿ ಪೋಲೀಸ್ ಇಲಾಖೆಗೆ ಪುರಸಭೆಯಿಂದ ಲಿಖಿತವಾಗಿ ದೂರು ಸಲ್ಲಿಸಿ ಸದರಿ ಅನಧಿಕೃತವಾಗಿ ಪ್ರತಿಷ್ಠಾಪಿಸಿದ ಗಣಪತಿ ವಿಗ್ರಹವನ್ನು ಖಿಲ್ಲಾ (ಖಾಲಿ) ಮಾಡಿಸಲು ಕೋರಲಾಯಿತು.

೩. ದಿನಾಂಕದ: ೧೭-೧-೨೦೦೦ ರಂದು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಈ ವಿಷಯದ ಬಗ್ಗೆ ಪುರಸಭೆಯ ಮುಖ್ಯಾಧಿಕಾರಿಗಳು ಪತ್ರ ಬರೆದು ಸದರಿ ಗಣಪತಿ ವಿಗ್ರಹವನ್ನು ಖಿಲ್ಲಾ ಮಾಡಿಸಲು ಸೂಕ್ತ ಪೋಲೀಸ್ ರಕ್ಷಣೆ ಒದಗಿಸಲು ಪತ್ರ ಬರೆಯಲಾಗಿತ್ತು.

೪. ದಿನಾಂಕದ ೨೧-೧-೨೦೦೦ರಂದು ಸಾರ್ವಜನಿಕರು ವರಸಿದ್ಧಿ ವಿನಾಯಕ ಸಂಘ ರಚನೆ ಮಾಡಿಕೊಂಡು ಸದರಿ ನಿವೇಶನವನ್ನು ಸರ್ಕಾರಿ ದರದ ರೀತ್ಯಾ ನಿಗದಿಪಡಿಸಿ ಸದರಿ ನಿವೇಶನವನ್ನು ಮಂಜೂರು ಮಾಡಿಕೊಡುವಂತೆ ಪುರಸಭೆಯನ್ನು ಕೋರಿರುತ್ತಾರೆ.

೫. ದಿನಾಂಕ: ೨೧-೧-೨೦೦೦ರಂದು ಸದರಿ ವರಸಿದ್ಧಿ ವಿನಾಯಕ ಸಂಘದವರಿಗೆ ಪುರಸಭಾ ನಿವೇಶನವನ್ನು ಹರಾಜಿನಲ್ಲಿ ಮಾತ್ರವೇ ವಿತರಿಸಲು ಸಾಧ್ಯವಿರುತ್ತದೆ. ಅಲ್ಲದೆ ಸರ್ಕಾರಿ ದರ ನಿಗದಪಡಿಸಿ ನಿವೇಶನ ನೀಡಲು ಪುರಸಭೆ ಕಾಯಿದೆಯಲ್ಲಿ ಅವಕಾಶವಿರುವುದಿಲ್ಲ ಎಂದು ಪುರಸಭೆಯವರು ಹಿಂಬರಹ ನೀಡಿದ್ದಾರೆ.

೬. ಚಾಮರಾಜನಗರ ಜಿಲ್ಲಾಧಿಕಾರಿಗಳು ದಿನಾಂಕ: ೨೧-೧-೨೦೦೦ರಂದು ಪಟ್ಟಣದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಭಂಗಬಾರದ ರೀತಿಯಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

೭. ಜಿಲ್ಲಾಧಿಕಾರಿಗಳು ದಿನಾಂಕ: ೨೧-೧-೨೦೦೦ ರಂದು ಕಳುಹಿಸಿರುವ ಪತ್ರದ ರೀತ್ಯಾ ಕ್ರಮ ಕೈಗೊಳ್ಳಲು ಕೋರಿ ಪೋಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ. ಪೋಲೀಸ್ ಇಲಾಖೆಯವರು ಇದುವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

(ಇ) ಬೆಂಗಳೂರಿನ ಕಂಠೀರವ ಸ್ಟೇಡಿಯಂ ಕುರಿತು.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವಂತಹ ಕಂಠೀರವ ಸ್ಟೇಡಿಯಂ ರಾಷ್ಟ್ರೀಯ ಕ್ರೀಡಾಕೂಟಕ್ಕೆ 1997ರಲ್ಲಿ ತರಾತುರಿಯಲ್ಲಿ ನಿರ್ಮಾಣವಾಯಿತು. ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾದ ಈ ಮುಖ್ಯ ಕ್ರೀಡಾಂಗಣದ ಇವತ್ತಿನ

ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಬೆಂಗಳೂರು ಉದ್ಯಾನ ನಗರವನ್ನು, ಸಿಂಗಾಪುರವನ್ನಾಗಿ ಮಾಡುವುದಾಗಿ ಸರ್ಕಾರ ಹೇಳುತ್ತಿರುತ್ತದೆ. ಆದರೆ ಕಂಠೀರವ ಕ್ರೀಡಾಂಗಣವನ್ನು ಮಸಣ ಮಾಡುತ್ತಾರೆ ಎಂಬ ಪ್ರಶ್ನೆ ನನ್ನದಾಗಿದೆ. ಅಲ್ಲಿರುವ ಆಸನಗಳೆಲ್ಲ ಮುರಿದು ಹೋಗಿದೆ. ಅಲ್ಲಿ ಮಾಡಿದ್ದ ಕೃತಕ ಟ್ರಾಕ್‌ಗಳು ಇವತ್ತು ಇಲ್ಲದಂತೆ ಆಗಿಬಿಟ್ಟಿದೆ. ಮಲ್ಟಿಜಿಮ್‌ನ ಪತ್ತೆಯೇ ಇಲ್ಲ. ನಾವು ಏನಾದರೂ ಜಿಮ್ ಮಾಡಬೇಕಾದರೆ ನೆಲದಲ್ಲಿ ಹೊರಳಾಡಬೇಕಾಗಿದೆ. 1997ರಲ್ಲಿ ಆದ ಎಲ್ಲಾ ನಿರ್ಮಾಣದ ವ್ಯವಸ್ಥೆಗಳು ಈಗ ಪೂರ್ಣವಾಗಿ ಕುಸಿದಿದೆ. ಕೇವಲ ಸ್ಕೆಲಿಟನ್ ಮಾತ್ರ ಇದೆ. 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ವೀಡನ್‌ನಿಂದ ಸ್ಕೋರ್ ಬೋರ್ಡ್‌ನ್ನು ತರಿಸಿಕೊಂಡಿದ್ದೀರಿ. ಆವತ್ತು ಮಾತ್ರ ಅದು ಉಪಯೋಗವಾಗಿತ್ತು. ಆನಂತರ ಅದು ಉಪಯೋಗವಾಗಿಲ್ಲ. ಏರ್‌ಕಂಡೀಷನ್ ವ್ಯವಸ್ಥೆ ಮಾಯವಾಗಿದೆ. ಸ್ಪೀಕರ್‌ಗಳು, ಅಮ್ಮಿಟಿಲೆಗಳು, ಎಲೆಕ್ಟ್ರಾನಿಕ್ ಗಡಿಯಾರಗಳು ಕಳ್ಳಕಾಕರ ಪಾಲಾಗಿದೆ. ಕೆಲವು ತುಕ್ಕು ಹಿಡಿದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಕೇಳುವವರೇ ಇಲ್ಲದಂತಾಗಿದೆ. ಇದನ್ನು ಉಳಿಸಬೇಕು ಎಂಬ ವಿಚಾರ ಎಲ್ಲ ಪತ್ರಿಕೆಗಳ ಮೂಲಕ ಬಂದಿದೆ. ಕ್ರೀಡಾಭಿಮಾನಿಗಳು ಕಂಠೀರವ ಕ್ರೀಡಾಂಗಣವನ್ನು ಉಳಿಸಲು ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದಿದೆ.

೧.೧೦ ಪಿಎಂ

ಈ ಪರಿಸ್ಥಿತಿಯಲ್ಲಿ ಸರಕಾರದವರು ಈ ಬಗ್ಗೆ ಏನು ಮಾಡುತ್ತಾರೆ ಎಂಬ ಬಗ್ಗೆ ಈ ಶೂನ್ಯವೇಳೆಯ ಪ್ರಸ್ತಾಪದಲ್ಲಿ ನಾನು ಸರ್ಕಾರದವರ ಗಮನವನ್ನು ಸೆಳೆಯ ಬಯಸುತ್ತೇನೆ.

+ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಬೆಂಗಳೂರಿನ ಕಂಠೀರವ ಕ್ರೀಡಾಂಗಣ ಕುರಿತು ಪ್ರಸ್ತಾಪಿಸಿದ ವಿಚಾರದ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುತ್ತೇನೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣವನ್ನು ೧೯೬೭ರ ಮೇ-ಜೂನ್ ಮಾಹೆಯಲ್ಲಿ ನಡೆದ ನಾಲ್ಕನೇ ರಾಷ್ಟ್ರೀಯ ಕ್ರೀಡೆಗಳಿಗಾಗಿ ಅಭಿವೃದ್ಧಿಗೊಳಿಸಲಾಯಿತು.

೧) ಆಗ ಆಳವಡಿಸಿದ ಕುರ್ಚಿಗಳ ವಿವರ ಮತ್ತು ಅವುಗಳ ಈಗಿನ ಸ್ಥಿತಿಯ ವಿವರಗಳು ಇಂತಿವೆ:

	ಆಳವಡಿಸಿದ್ದು	ಹಾನಿಯಾಗಿರುವುದು.	ಷರಾ.
ಅ) ವಿ.ಐ.ಪಿ ಕುರ್ಚಿಗಳು	೧೩೦೫	೨೧೦	ಕೈಗಳು ಮುರಿದಿವೆ.

ಆ) ಪತ್ರಿಕಾ ವರದಿಗಾರರಿಗೆ	೨೫೬	೧೨೩	ಹಲಗೆಗಳು ಮುರಿದಿವೆ.
ಇ) ಇತರೆ	೬೩೨೪	---	ಹಾನಿಯಾಗಿರುವುದಿಲ್ಲ.

ಹಾನಿಯಾಗಿರುವ ಕುರ್ಚಿಗಳನ್ನು ದುರಸ್ತಿ ಮಾಡಲಾಗುವುದು.

೨) ಅಮೇರಿಕೆಯ ಮೆ.ಮಾರ್ಟಿನ್ ಸರ್ಫೇಸಿಂಗ್ ಇಂಕ್.ಸಂಸ್ಥೆಯಿಂದ ಸಿಂಥಟಿಕ್ ಟ್ರಾಕನ್ನು ಆಮದು ಮಾಡಿಕೊಳ್ಳಲಾಗಿದೆ. ೮೦೦೦ ಚದರ ಅಡಿಗಳ ಈ ಹಾಸಿನಲ್ಲಿ ಕೆಲವು ಕಡೆ ಕೊರತೆಗಳನ್ನು ಗಮನಿಸಲಾಗಿದೆ:

ಅ) ಕೆಲವು ಭಾಗಗಳಲ್ಲಿ ಸಮತಟ್ಟಾಗಿರುವುದಿಲ್ಲ.

ಆ) ಲೇನ್ ಗುರುತುಗಳನ್ನು ಸರಿಮಾಡಬೇಕಾಗಿದೆ.

ಇ) ಲೇನ್ ಒಂದರಲ್ಲಿ ಕೆಲವು ಕಡೆ ನೀರು ನಿಲ್ಲುತ್ತಿದೆ.

ಈ) ಉದ್ದ ಜಿಗಿತದ ಓಡುವ ಜಾಗವು ಉಬ್ಬಾಗಿರುತ್ತದೆ.

ಸರಬರಾಜುದಾರರಿಂದ ಕೊರತೆಗಳನ್ನು ಸರಿಪಡಿಸಲು ಕ್ರಮತೆಗೆದುಕೊಳ್ಳಲಾಗಿದೆ.

೩) ರಾಷ್ಟ್ರೀಯ ಕ್ರೀಡೆಗಳಾದ ನಂತರ ಜನವರಿ ೨೦೦೦ ವರೆವಿಗೆ ಕ್ರೀಡಾಂಗಣಗಳ ಸೌಲಭ್ಯಗಳನ್ನು ಸುಸ್ಥಿತಿಯಲ್ಲಿಡಲು, ಅಭಿವೃದ್ಧಿ ಪಡಿಸಲು ಮತ್ತು ಬಲಪಡಿಸಲು ರೂ.೫೬,೨೫.೦೦೦/=ಗಳನ್ನು ವೆಚ್ಚ ಮಾಡಲಾಗಿದೆ.

ಮಾನ್ಯ ಅಧ್ಯಕ್ಷರೇ, ಕಂಠೀರವ ಕ್ರೀಡಾಂಗಣವನ್ನು ನಾವು ೫೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದ್ದೇವೆ. ಇದರಲ್ಲಿ ಟ್ರಾಕ್ ಬಗ್ಗೆ ಹೇಳುವುದಾದರೆ ಸಿಂಥೆಟಿಕ್ ಟ್ರಾಕ್ ನಮ್ಮಲ್ಲಿ ಏಷಿಯನ್ ಗೇಮ್ಸ್ ನಡೆದಾಗ ಅಮೇರಿಕೆಯ ಮೆ.ಮಾರ್ಟಿನ್ ಸರ್ಫೇಸಿಂಗ್ ಇಂಕ್ ಸಂಸ್ಥೆಯವರಿಗೆ ಈ ಕಂಟ್ರಾಕ್ಟ್‌ನ್ನು ಕೊಟ್ಟಿದ್ದೆವು. ಇದರಲ್ಲಿನ ಎರಡು ಮೂರು ಸರ್ಫೇಸಸ್‌ಗಳಲ್ಲಿ ಹಾಳಾಗಿತ್ತು. ಆ ಕುರಿತು ನಾವು ಮಾರ್ಟಿನ್ ಸರ್ಫೇಸಿಂಗ್ ಕಂಪನಿಯವರನ್ನು ಸಂಪರ್ಕಿಸಿದಾಗ ಅವರ ಕಂಪನಿಯು ಕ್ಲೋಸ್ ಆಗಿದ್ದು ಅವರು ಇನ್ನೊಂದು ಕಂಪನಿಗೆ ಟೇಕ್-ಓವರ್ ಮಾಡಿದ್ದಾರೆ. ಆ ಕಂಪನಿಯವರನ್ನು ನಾವು ಕಾಂಟಾಕ್ಟ್ ಮಾಡಿದ್ದೇವೆ. ಆದಷ್ಟು ಬೇಗ ಬಂದು ಅದನ್ನು ಸರಿಪಡಿಸಲು ನಾವು ಹೇಳಿದ್ದೇವೆ. ತಾವುಗಳು ಹೇಳಿದ ರೀತಿಯಲ್ಲಿ ೧೯೯೭ರಿಂದ ಜನವರಿ ೨೦೦೦ನೇ ಇಸವಿಯವರೆಗೆ ೫೬,೨೫,೦೦೦ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ನಾನು ಈ ಇಲಾಖೆಯ ಸಚಿವನಾಗಿ ಮೊಟ್ಟಮೊದಲ ಬಾರಿಗೆ

ಕ್ರೀಡಾಂಗಣಕ್ಕೆ ಹೋದಾಗ ಅಲ್ಲಿ ರಸ್ತೆಗಳು ಮತ್ತು ಚರಂಡಿ ವ್ಯವಸ್ಥೆಗಳು ಬಹಳ ಹದಗೆಟ್ಟಿರುವುದನ್ನು ನೋಡಿದ್ದೇನೆ. ಕೂಡಲೇ ೯,೬೫,೦೦೦ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಹಾಗೂ ಬಾಸ್ಕೆಟ್‌ಬಾಲ್ ಆವರಣಕ್ಕೆ ಫೆನ್ಸಿಂಗ್, ಮುಂತಾದ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಅದು ಮುಗಿಯುವ ಹಂತದಲ್ಲಿದೆ. ಹಾಗೆಯೇ ಕಾಂಪೌಂಡ್ ಹಾಕಿಸುವ ಕಾಮಗಾರಿಯ ಬಗ್ಗೆ ಅಂದಾಜನ್ನು ತಯಾರಿಸಿ ಅದನ್ನು ಆದಷ್ಟು ಜಾಗ್ರತೆ ಪೂರ್ಣಗೊಳಿಸಲು ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಶೂನ್ಯವೇಳೆಯ ಪ್ರಸ್ತಾಪಗಳು ಇನ್ನೂ ಹಲವಾರು ಇವೆ. ಅವುಗಳನ್ನು ಒಂದೇ ದಿನದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಪ್ರತಿ ದಿನವೂ ೩-೪ ತೆಗೆದುಕೊಂಡು ಮುಗಿಸೋಣ. ಈಗ ಗಮನಸೆಳೆಯುವ ಸೂಚನೆ.

೫. ಗಮನ ಸೆಳೆಯುವ ಸೂಚನೆ:

ಮೈಸೂರಿನಲ್ಲಿರುವ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಫ್ಯಾಕ್ಟರಿ ಮುಚ್ಚಿರುವುದರಿಂದ ಕಾರ್ಮಿಕರಿಗೆ ಉಂಟಾಗಿರುವ ತೊಂದರೆ.

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬರುವ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಫ್ಯಾಕ್ಟರಿಯು ತುರ್ತು ಕಾರಣಗಳಿಗಾಗಿ ನಷ್ಟದಿಂದ ಕೂಡಲೇ ಮುಚ್ಚುವ ಸ್ಥಿತಿಗೆ ಬಂದು, ಮುಚ್ಚುವ ಎಲ್ಲಾ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಸಾವಿರಾರು ಕಾರ್ಮಿಕರು ಈ ರೀತಿ ಮುಚ್ಚುವುದರಿಂದ ಬೀದಿಪಾಲಾಗುತ್ತಿದ್ದಾರೆ. ಈ ವಿಷಯ ಬಹಳ ಗಂಭೀರವಾಗಿದೆ, ತುರ್ತಾಗಿದೆ. ಈ ವಿಚಾರವನ್ನು ಸರಕಾರದ ಸನ್ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

+ ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಹೇಳಿಕೆಯನ್ನು ನಾನು ನೀಡುತ್ತೇನೆ.

ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ (ಸಿಎಂಟಿಎಲ್)ವು 1975ರಲ್ಲಿ ಕೇಂದ್ರ ಸರ್ಕಾರದ ಹಾಫ್ ಮಿಲಿಯನ್ ಜಾಬ್ಸ್ ಯೋಜನೆಯಡಿಯಲ್ಲಿ ಹೆಚ್‌ಎಂಟಿಯ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು. ಇಲ್ಲಿ ಎಲ್‌ಬಿ - 17 ಸೆಂಟರ್ ಲೇತ್‌ಗಳನ್ನು ತಯಾರಿಸಲಾಗುತ್ತಿದೆ. ಈ ಕಂಪನಿಯು 10 ಅನ್ಸಿಲರಿ ಯುನಿಟ್ಸ್‌ಗಳನ್ನು ಹೊಂದಿದ್ದು (ಘಟಕಗಳು) ಈ ಎಲ್‌ಬಿ - 17 ಸೆಂಟರ್ ಲೇತ್‌ಗಳ ಅವಶ್ಯವಿರುವ